



ಕನ್ನಡದಲ್ಲಿ ಆಧ್ಯಾತ್ಮಿಕ ಸಾಹಿತ್ಯವನ್ನು ಶ್ರೀಮಂತಗೊಳಿಸಿರುವ ಪುರಂದರದಾಸರು, ವಿಜಯದಾಸರು, ಗೋಪಾಲದಾಸರು ಹಾಗೂ ಜಗನ್ನಾಥದಾಸರು 'ದಾಸಚತುಷ್ಟಯ'ರೆಂದು ಪ್ರಸಿದ್ಧ ರಾಗಿದ್ದಾರೆ. ಇವರಲ್ಲಿ ಕೊನೆಯವರಾದ ಶ್ರೀ ಜಗನ್ನಾಥದಾಸರಲ್ಲಿ ದಾಸಸಾಹಿತ್ಯವು ಪ್ರೌಢಾವಸ್ಥೆಯನ್ನು ತಲುಪಿತು. ಜನಪದ ಸಾಹಿತ್ಯವು ಇವರ ಕೃತಿಗಳಲ್ಲಿ ಒಂದು ರೀತಿಯಾಗಿ ಮರುಹುಟ್ಟು ಪಡೆದಿದೆ.

ಶ್ರೀ ಜಗನ್ನಾಥದಾಸರು (ಕ್ರಿ.ಶ. ೧೭೨೮-೧೮೦೯) ತಮ್ಮ ೮೧ ವರ್ಷಗಳ ಸುದೀರ್ಘ ಬಾಳಿನಲ್ಲಿ ಪರಿಶುದ್ಧವಾದ, ನಿರ್ಮಲಾಂತಃಕರಣವುಳ್ಳ ಹಾಗೂ ಅನುಕರಣೀಯವಾದ ಸಾರ್ಥಕ ಜೀವನವನ್ನು ನಡೆಸಿ ಮುಂದಿನ ಸಾಧಕರ ಪೀಳಿಗೆ ಗಳಿಗಾಗಿ ಸಮೃದ್ಧವಾದ ಅಧ್ಯಾತ್ಮ ಸಾಹಿತ್ಯವನ್ನು ಸೃಷ್ಟಿಸಿದ ಶ್ರೇಷ್ಠ ಹರಿದಾಸರು. ಇಂದಿನ ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನಲ್ಲಿರುವ ಬ್ಯಾಗವಟ್ಟ ಎಂಬ ಗ್ರಾಮದಲ್ಲಿ ವಾಸಿಸುತ್ತಿದ್ದ ನರಸಿಂಹಾಚಾರ್ಯ ಮತ್ತು ಲಕ್ಷ್ಮೀಬಾಯಿ ಎಂಬ ಮಾಧ್ವ ದಂಪತಿಗಳಿಗೆ ಇವರು ತಿರುಪತಿಯ ಶ್ರೀನಿವಾಸನ ಅನುಗ್ರಹ ದಿಂದ ಹುಟ್ಟಿದರು. ಅಂತೆಯೇ 'ಶ್ರೀನಿವಾಸ' ಎಂಬ ನಾಮ ಕರಣ. ಬಾಲ್ಯದಿಂದಲೇ ಆಶುಕವಿತ್ವದ ಶಕ್ತಿಯಿದ್ದ ಇವರ ಪ್ರತಿಭೆ ಪ್ರಕಾಶಗೊಂಡು ಮುಂದೆ ಮಂತ್ರಾಲಯದ ವರದೇಂದ್ರ ತೀರ್ಥ ಸ್ವಾಮಿಗಳಲ್ಲಿ ವಿದ್ಯಾಭ್ಯಾಸ ಪಡೆದು ಶಾಸ್ತ್ರಪಾರಂಗತರಾಗಿ ಆಚಾರ್ಯ ಪಟ್ಟವನ್ನು ಗಳಿಸಿ 'ಶ್ರೀನಿವಾಸಾಚಾರ್ಯ'ರಾದರು.

ಉದ್ದಾಮ ಪಂಡಿತರಾಗಿದ್ದ ಶ್ರೀನಿವಾಸಾಚಾರ್ಯರು ಆಂತರಿಕ ಪರಿವರ್ತನೆಯನ್ನು ಹೊಂದಿ ಭಾಗವತೋತ್ತಮರಾದ ಬಗೆ ವಿಸ್ಮಯಕಾರಿಯಾಗಿದೆ. ಸಂಸ್ಕೃತಭಾಷೆ, ಸಾಹಿತ್ಯ, ಮಧ್ವ ಶಾಸ್ತ್ರಗಳಲ್ಲಿ ಪರಿಣತರಾಗಿದ್ದ ಇವರ ಬಳಿ ಪಂಡಿತ ವರ್ಗದವರು ಮಾತ್ರ ಸುಳಿದಾಡುತ್ತಿದ್ದರೇ ವಿನಾ ನಿಗರ್ವಿಗಳೂ, ಆಡಂಬರ ರಹಿತರೂ, ಅಂತರ್ಮುಖಿಗಳೂ ಆದ ಹರಿದಾಸರು ಸುಳಿಯು ವುದಕ್ಕೆ ಅವಕಾಶವಿರಲಿಲ್ಲವೆಂದು ಕಾಣುತ್ತದೆ. ದಾಸಧರ್ಮದಲ್ಲಿ ಎಳ್ಳಷ್ಟೂ ವಿಶ್ವಾಸವಿರದಿದ್ದ ಇವರಿಗೆ ಹರಿದಾಸರನ್ನು ಕಂಡರೆ



ಒಂದು ಬಗೆಯ ತಾತ್ಸಾರ, ತಿರಸ್ಕಾರ. ಈ ಸಂದರ್ಭದಲ್ಲಿಯೇ ಒಂದು ಅಪೂರ್ವ ಘಟನೆ ನಡೆಯಿತು. ಆಗಿನ ಕಾಲದಲ್ಲಿ ಅನುಭಾವಿಗಳೆಂದೇ ಪ್ರಸಿದ್ಧರಾಗಿದ್ದ ವಿಜಯದಾಸರೊಡನೆ ನಿಂದಾರ್ಹವಾದ ರೀತಿಯಲ್ಲಿ ನಡೆದುಕೊಂಡುದರ ಫಲವೋ ಏನೋ ಎಂಬಂತೆ ಶ್ರೀನಿವಾಸಾಚಾರ್ಯರು ಬಹು ಕಾಲ ಘೋರವಾದ ಉದರವ್ಯಾಧಿಯಿಂದ ನರಳಬೇಕಾಯಿತು. ಇದು ಅವರ ಜೀವಕ್ಕೇ ಗಂಡಾಂತರ ತಂದಿತ್ತು. ಅವರ ಹಿತೈಷಿಗಳ, ಬಂಧುಬಾಂಧವರ ಸಲಹೆಯುಷ್ಟೇ ಅಲ್ಲದೆ ಸ್ವಪ್ನದಲ್ಲಿ ಶ್ರೀಹರಿಯು ನೀಡಿದ ಸೂಚನೆಯಂತೆ ಅವರು ಪರಿಹಾರಕ್ಕಾಗಿ ವಿಜಯದಾಸರನ್ನು ಮೊರೆಹೊಕ್ಕರು. ವಿಜಯದಾಸರು ಇವರನ್ನು ರೋಗ ನಿವಾರಣೆಗಾಗಿ ತಮ್ಮ ಶಿಷ್ಯ ಗೋಪಾಲದಾಸರ ಬಳಿ ಕಳುಹಿಸಿದರು. ಗೋಪಾಲದಾಸರು ತಮ್ಮ ಗುರುಗಳ ಆದೇಶ ದಂತೆ ಶ್ರೀನಿವಾಸಾಚಾರ್ಯರನ್ನು ಸಂತೈಸಿ, ಧನ್ವಂತರಿ ದೇವನನ್ನು ಸ್ಮರಿಸುತ್ತ, ಹರಿಗೆ ಅರ್ಪಿತವಾಗಿದ್ದ ಭಕ್ಕರಿಯನ್ನು ನೀಡಿ, ಅವರ ರೋಗವನ್ನು ಗುಣಪಡಿಸಿದರು. ಶ್ರೀನಿವಾಸಾ ಚಾರ್ಯರಿಂದ ಮುಂದೆ ಮಹತ್ಕಾರ್ಯವಾಗಬೇಕಾಗಿದೆ ಎಂದೂ, ಆದರೆ ಅವರು ಅಲ್ಪಾಯುಗಳೆಂದೂ ಮನಗಂಡಿದ್ದ ವಿಜಯದಾಸರು, ಅವರಿಗೆ ಆಯುರ್ದಾನ ಮಾಡುವಂತೆಯೂ ತಮ್ಮ ಶಿಷ್ಯ ಗೋಪಾಲದಾಸರಿಗೆ ಸೂಚಿಸಿದ್ದರು. ಗೋಪಾಲ ದಾಸರು ತಮ್ಮ ಆಯಸ್ಸಿನಲ್ಲಿ ನಲವತ್ತು ವರ್ಷಗಳನ್ನು ಶ್ರೀನಿವಾಸಾಚಾರ್ಯರಿಗೆ ಧಾರೆಯೆರೆದರು.

ಹೀಗೆ ಹರಿದಾಸರ ಕೃಪೆ ಮತ್ತು ಹರಿದಾಸ ದೀಕ್ಷೆಯ ಮಹಿಮೆಯಿಂದ ತಮಗೆ ಲಭ್ಯವಾದ ರೋಗಮುಕ್ತಿ ಮತ್ತು

ಆಯುರ್ವೃದ್ಧಿಗಳು ಶ್ರೀನಿವಾಸಾಚಾರ್ಯರ ಕಣ್ಣು ತೆರೆಸಿದವು. ಅವರ ಜೀವನದಲ್ಲಿ ಅಗಾಧವಾದ ಮಾರ್ಪಾಟಾಯಿತು. ಅವರಲ್ಲಿ ಹೊಸ ಚೇತನ ಮೂಡಿತು. ಪಾಂಡಿತ್ಯದ ಮದ, ಅಡಗಿತು. ಹುಟ್ಟಿನಿಂದ ಬಂದ ಗರ್ವವೂ ಭಂಗವಾಯಿತು. ದಾಸರ ಸಹವಾಸದಿಂದ ಅರಿವು ಅರಳಿತು. ತಾವೂ ದಾಸದೀಕ್ಷೆಯನ್ನು ಪಡೆದು ಹರಿದಾಸರಾಗಬೇಕೆಂಬ ಉತ್ಕಟೇಚ್ಛೆ ಅವರಲ್ಲಿ ಮೂಡಿತು. ಶ್ರೀನಿವಾಸಾಚಾರ್ಯರು ಗೋಪಾಲದಾಸರಲ್ಲಿ ತಮ್ಮ ಇಂಗಿತವನ್ನು ತಿಳಿಸಿದಾಗ ದೈವೀಪ್ರಸಾದ ರೂಪದಲ್ಲಿ ಪಾಂಡುರಂಗ ವಿಠಲನೇ ಅವರಿಗೆ ಅಂಕಿತವನ್ನು ಕರುಣಿಸುವನೆಂದು ಭರವಸೆ ನೀಡಿ ಅವರನ್ನು ಪಂಢರಾಪುರಕ್ಕೆ ಕಳುಹಿಸಿದರು. ಅಲ್ಲಿ ಚಂದ್ರಭಾಗಾ ನದಿಯಲ್ಲಿ ಮುಳುಗುಹಾಕಿ ಏಳುತ್ತಿರುವಾಗ 'ಜಗನ್ನಾಥ ವಿಠಲಾಂಕಿತ' ದಿವ್ಯಶಿಲೆಯು ಅವರ ಕೈ ಸೇರಿತು. ಅದನ್ನೇ ಅವರು ದೈವದತ್ತವಾದ ಅಂಕಿತ ಎಂದು ಬಗೆದರು. ಅದನ್ನು ಕಣ್ಣಿಗೊತ್ತಿಕೊಂಡು ತಮ್ಮ ಜನ್ಮವು ಸಾರ್ಥಕವಾಯಿತೆಂದು ಬಗೆದರು. ಆ ಕ್ಷಣದಿಂದಲೇ ಅವರು ಜಗನ್ನಾಥವಿಠಲನ ದಾಸರಾಗಿ ಜಗನ್ನಾಥದಾಸರೆಂದು ಗುರುತಿಸಲ್ಪಟ್ಟರು.

ಸಾಮಾನ್ಯ ಬುದ್ಧಿಗೆ ಅಗೋಚರವಾದ, ನಿಗೂಢವಾದ ಆದರೆ ಬದುಕನ್ನು ಶ್ರೀಮಂತಗೊಳಿಸುವ ಅಪೂರ್ವ ತತ್ತ್ವಜ್ಞಾನದ ನಿಧಿಯನ್ನು ಜಗನ್ನಾಥದಾಸರು ತಮ್ಮ ಕೃತಿಗಳಲ್ಲಿ ಹುದುಗಿಸಿಟ್ಟಿದ್ದಾರೆ. ಅಗಾಧ ಸಂಖ್ಯೆಯಲ್ಲಿ ರಚಿತವಾದ ಇವರ ಕೃತಿಗಳಲ್ಲಿನ ಮುಖ್ಯ ತತ್ತ್ವಗಳು ಇವು: ಕಾರ್ಯ-ಕಾರಣ ನಿಯಮಗಳಿಗೆ ಮೀರಿದ, ಸ್ವತಂತ್ರನಾದ, ಸರ್ವೋತ್ತಮನಾದ, ದೋಷಲೇಶವೂ ಇಲ್ಲದ, ಅಗಾಧ ಅನುಪಮ ಶಕ್ತಿಯುಳ್ಳ, ಸರ್ವಜ್ಞಶಿಖಾಮಣಿಯಾದ ಪರಮಾತ್ಮನೊಬ್ಬನಿದ್ದಾನೆ. ಆ ಪರಮಾತ್ಮನಲ್ಲಿ ನಾವು ಬೆಳೆಸಿಕೊಳ್ಳುವ ಭಕ್ತಿಯೇ ನಮ್ಮ ಬದುಕಿನ ಕಷ್ಟಕಾರ್ಪಣ್ಯಗಳ, ನೋವುದುಃಖಗಳ ಮಧ್ಯೆ ಇರುವ ಏಕೈಕ ಭರವಸೆ. ಐಹಿಕ ಸುಖವನ್ನೇ ನಂಬಿ ಮೋಸಹೋಗದೆ ಅಥವಾ ಕಷ್ಟಗಳಿಂದ ಕಂಗಾಲಾಗದೆ ಹಾನಿ-ವೃದ್ಧಿ, ಲಾಭ-ನಷ್ಟ, ಜಯ-ಅಪಜಯಗಳನ್ನು ಶ್ರೀಹರಿಯ ಪ್ರಸಾದವೆಂದು ಸ್ವೀಕರಿಸಿದಾಗ, ಎಲ್ಲ ದುಃಖಗಳಿಗೂ ಮೂಲವಾದ ಮಮಕಾರ ಅಳಿಯುತ್ತದೆ. ಅಂತಃಕರಣ ನಿರ್ಮಲವಾಗಿ ಐಹಿಕ ಮತ್ತು ಪಾರಲೌಕಿಕ ಬದುಕಿನ ಸತ್ಯಗಳು ಅಂತರಂಗಕ್ಕೆ ಗೋಚರವಾಗುತ್ತವೆ. ಲೋಕಜೀವನ ಅಸಾರ, ಅಸಹ್ಯ ಎಂದು ತ್ಯಜಿಸಿ ಕಾಡಿನಲ್ಲಿ ಕೂಡಬೇಕಾಗಿಲ್ಲ. ಶ್ರೀಹರಿಯ ದಾಸನಾಗಿ ಪರಿಶುದ್ಧ ಜೀವನವನ್ನು ನಡೆಸಿ, ಸಮಾಜಕ್ಕೆ ಉಪಯೋಗವಾಗುವಂತೆ ಬದುಕಬೇಕು ಎಂಬ ಆಶಯವನ್ನು ಇವರ ಕೃತಿಗಳಲ್ಲಿ ಮತ್ತೆ ಮತ್ತೆ ಕಾಣಬಹುದು. ಇವರ ಅನೇಕ ಕೀರ್ತನೆ, ಪದ, ಸುಳಾದಿ, ಸುವ್ವಾಲಿಗಳನ್ನು ಓದುತ್ತಿದ್ದರೆ, ಕೇಳುತ್ತಿದ್ದರೆ ಅವು ಪ್ರತಿಯೊಬ್ಬ ಓದುಗನಿಗೂ ಅನ್ವಯಿಸುವಂತೆ ತೋರುತಿರುತ್ತವೆ.

ಜಗನ್ನಾಥದಾಸರು ಸಂಸ್ಕೃತದಲ್ಲಿ ಪಂಡಿತರಾಗಿದ್ದರೂ ಕನ್ನಡದ ಕೆಚ್ಚನ್ನು ಮರೆತಿರಲಿಲ್ಲ. ಅವರ ಕನ್ನಡದ ಅಭಿಮಾನ, ಅವರ ಪದ್ಯಗಳಲ್ಲಿ ಮೂರ್ತಿಮತ್ತಾಗಿ ಒಡಮೂಡಿದೆ. ಇವರ ಎಲ್ಲ ಕೃತಿಗಳಲ್ಲಿ ಅತ್ಯಂತ ಪ್ರಮುಖವೂ ಜನಪ್ರಿಯವೂ ಆದುದು ಹರಿಕಥಾಮೃತಸಾರ. ಸಾಮಾನ್ಯರಿಗಾಗಿಯೇ ರಚಿತವಾಗಿರುವ ಈ ಗ್ರಂಥವು ಜನರಾಡುವ ಭಾಷೆಯಾದ ಕನ್ನಡದಲ್ಲಿದೆ. ಹರಿಕಥಾಮೃತಸಾರವನ್ನು 'ಕನ್ನಡದ ಸುಧಾ' ಎಂದು ವಿದ್ವಾಂಸರು ಕರೆದಿದ್ದಾರೆ. ಅಧ್ಯಾತ್ಮ ವಿಚಾರಗಳೆಲ್ಲವೂ ಒಂದು ಕೃತಿಯಲ್ಲಿ ಕ್ರೋಡೀಕೃತವಾಗಿರುವುದು ಯಾವುದೇ ಭಾಷೆಯಲ್ಲಾದರೂ ವಿರಳವಾದುದು. ಅಂತಹ ಅಪೂರ್ವ ಕೃತಿಯಾದ ಹರಿಕಥಾಮೃತಸಾರವು ವೇದಾಂತದ ವಿಶ್ವಕೋಶದಂತಿದೆ. ದಿನನಿತ್ಯವೂ ಪ್ರಪಂಚದಲ್ಲಿ ಕಂಡುಬರುವ ಉದಾಹರಣೆಗಳ ಮೂಲಕ ಸಮಗ್ರ ಬದುಕಿನ ವಿಶ್ಲೇಷಣೆ ಇದರಲ್ಲಿ ನಡೆದಿದೆ. ಅನುಭವ, ಜ್ಞಾನಸಮೃದ್ಧಿ, ಶಾಸ್ತ್ರದರ್ಶನ, ತತ್ತ್ವನಿಷ್ಠೆ ಇವುಗಳೆಲ್ಲ ಮೇಳೈಸಿದ ಪರಿಪಾಕದ ಫಲಶ್ರುತಿಯೇ ಹರಿಕಥಾಮೃತಸಾರ. ನಿಜವಾಗಿಯೂ ಈ ಗ್ರಂಥದಲ್ಲಿ ಪರಮಾತ್ಮನ ಕಥೆಯ ಅಮೃತದ ಸಾರವೇ ಅಡಕಗೊಂಡಿದ್ದು ಪಾಮರರನ್ನು ಪರಮಾತ್ಮನತ್ತ ಕರೆದೊಯ್ದು ಪುನೀತಗೊಳಿಸುತ್ತದೆ.

ದಾಸರ ಸೂಕ್ಷ್ಮದೃಷ್ಟಿಗೆ ಹೊರತಾದುದು ಯಾವುದೂ ಇಲ್ಲ. ಎಲ್ಲೆಲ್ಲೂ ದೇವರನ್ನು ಕಾಣುವ ಜಾಣ್ಮೆಯನ್ನು ಸಾಧಕನು ತನ್ನ ಜೀವನಶೈಲಿಯಲ್ಲಿ ಹೇಗೆ ಅಳವಡಿಸಿಕೊಳ್ಳಬೇಕೆಂಬುದನ್ನು ತಿಳಿಸುತ್ತಾ:

ಒರಟು ಬುದ್ಧಿಯ ಬಿಟ್ಟು ಲೌಕಿಕ
ಹರಟೆಗಳನೀಡಾಡಿ ಕಾಂಚನ
ಪರಟಲೋಷ್ಠಾದಿಗಳು ಸಮವೆಂದರಿದು ನಿತ್ಯದಲಿ
ಪುರುಷ ಗರ್ಭಾಂಡೋದರನು ಸ
ತ್ಪುರುಷನೆಂದೆನಿಸೆಲ್ಲರೊಳಗಿದ್ದು
ಪುರುಷ ಕರ್ಮವ ಮಾಳ್ಪನೆಂದಡಿಗಡಿಗೆ ನೆನೆವುತಿರು

"ಸಮಚಿತ್ತನಾಗಿ ನಿನ್ನ ಕರ್ಮಗಳನ್ನು ಆಚರಿಸು. ಒರಟು ಬುದ್ಧಿಯನ್ನು ಬಿಡು. ಲೌಕಿಕದ ಹರಟೆ (ಕಾಡುಹರಟೆ)ಗಳನ್ನು ಕಡಿಮೆ ಮಾಡು. ಕಾಂಚನ, ಪರಟೆ (ಚಿಪ್ಪು) ಲೋಷ್ಠ (ಮಣ್ಣಿನ ಹೆಂಟೆ) ಇವುಗಳಲ್ಲಿ ವ್ಯತ್ಯಾಸ ಎಣಿಸಬೇಡ, ಎಲ್ಲವನ್ನೂ ಸಮನಾಗಿ ತಿಳಿ. ನಿನ್ನ ದೃಷ್ಟಿಯಲ್ಲಿ ಬಂಗಾರ ಮತ್ತು ಚಿಪ್ಪಿನ ಬೆಲೆ ಒಂದೇ ಆಗಿರಲಿ. ಪುರುಷ ಗರ್ಭಾಂಡೋದರನು = ಬ್ರಹ್ಮನನ್ನು ಉದರದಲ್ಲಿಟ್ಟ (ಭಗವಂತನು) ಸರ್ವಶ್ರೇಷ್ಠನೆಂದೆನಿಸಿ, ಎಲ್ಲರಲ್ಲೂ ವಾಸವಾಗಿದ್ದು, ಅವರವರಿಂದ ಅವರಿಗೆ ಯೋಗ್ಯವಾದ ಕರ್ಮಗಳನ್ನು ಮಾಡಿಸುತ್ತಾನೆ ಎಂದು ಅಡಿಗಡಿಗೆ ಭಜಿಸು."

ಮಾನವನ ಬಾಳು ಸಾರ್ಥಕವಾಗಬೇಕಾದರೆ ಅವನು ನಡೆದುಕೊಳ್ಳಬೇಕಾದಂಥ ಕ್ರಮವನ್ನು ದಾಸರು, 'ಫಲವಿದು ಬಾಳ್ವುದಕೆ' ಎಂಬ ಕೀರ್ತನೆಯಲ್ಲಿ ವಿಶದವಾಗಿ ತಿಳಿಸಿರುವರು. ಈ ಬದುಕಿನಲ್ಲಿ ಎಷ್ಟೇ ಘೋರವಾದ ದುಃಖ, ಕಷ್ಟಗಳು ಒದಗಿದರೂ ಭಗವಂತನ ನಾಮಸ್ಮರಣೆಯೊಂದಿದ್ದರೆ ಸಾಕು ಎಂಬುದನ್ನು ಮಾರ್ಮಿಕವಾಗಿ ಈ ರೀತಿ ತಿಳಿಸುತ್ತಾರೆ.

**ನಿನ್ನ ವಿಸ್ಮೃತಿ ಜನ್ಮಜನ್ಮಕ್ಕೆ ಕೊಡದಿರು**
**ಎನ್ನ ಕುಲದೈವ ಎಂದೆಂದು । ಎಂದೆಂದು ನಿನಗಾನು**
**ಬಿನ್ನೈಪೆ ಬಿಡದೆ ಇನಿತೆಂದು ...**
**ಹಗಲು ಇರಳು ಸ್ಮರಣೆಯೊದಗುತಿರೆ ಜಿಹ್ವೆಯೊಳು**
**ಬೆಗಲಿನ್ನುಂಟೆ ಸಾಧನಗಳು । ಸಾಧನಗಳೇತಕ್ಕೆ**
**ಜಗದೊಳಗೆ ಇನ್ನು ಅವರಿಗೆ...**

ಭಗವಂತನ ನಾಮಸ್ಮರಣೆಯೊಂದಿದ್ದರೆ ಎಂತಹ ಘೋರವಾದ ನರಕವೂ ಸೈ; ಆದರೆ ನಾಮಸ್ಮರಣೆಯೊಂದಿಲ್ಲದೆ ಎಂತಹ ಪುಣ್ಯ ತರುವ ಸ್ವರ್ಗವನ್ನೂ ಒಲ್ಲೆ ಎಂಬ ಕೆಚ್ಚು ಈ ದಾಸವರೇಣ್ಯರದು. ಶ್ರೀಹರಿಯ ವಿಸ್ಮರಣೆಯೇ ಮಹಾಪಾಪ; ಸ್ಮರಣೆಯೇ ಮಹಾಪುಣ್ಯ; ಸ್ಮರಣಸಹಿತವಾಗಿ ವಿಹಿತ ಕರ್ಮಗಳನ್ನು ಆಚರಿಸಬೇಕೆಂಬುದೇ ದಾಸರ ಆಶಯ.

**ನಿನ್ನ ವಿಸ್ಮೃತಿ ಕೊಡುವ ಪುಣ್ಯ ಕರ್ಮಗಳೊಲ್ಲೆ**
**ನಿನ್ನನ್ನೇ ನೆನೆವ ಮಹಪಾಪ । ಮಹಪಾಪ ಕರ್ಮಗಳು**
**ಜನ್ಮಜನ್ಮದಲಿ ಇರಲಯ್ಯ...**

ಹರಿಕಥಾಮೃತಸಾರವು ತೆಲುಗು, ಮರಾಠಿ, ತಮಿಳು ಮುಂತಾದ ಭಾಷೆಗಳಿಗೂ ಅನುವಾದಗೊಂಡು ನೆರೆಯ ಪ್ರಾಂತ್ಯಗಳಲ್ಲೂ ತುಂಬ ಜನಪ್ರಿಯವಾಗಿದೆ. ಈಚೆಗೆ ಇದು ಇಂಗ್ಲಿಷಿಗೂ ಭಾಷಾಂತರವಾಗಿದೆ. ಶ್ರೀ ಜಗನ್ನಾಥದಾಸರ 'ರಂಗ ನಿನ್ ಕೊಂಡಾಡುವ' 'ದಾಸೋऽಹಂ ತವ ದಾಸೋऽಹಂ' 'ಶ್ರೀವೆಂಕಟಶೈಲಾಧಿಪ ನಮೋ,' 'ಶ್ರೀನಿಕೇತನ,' 'ಏಕೆ ಮೂಕನಾದ್ಯೋ' 'ಅಶನ ವಸನಗಳೀವ ದುರಿತವನಕುಠಾರಿ' ಮೊದಲಾದ ಕೀರ್ತನೆಗಳು, ಸುವ್ವಾಲಿಗಳು, ಸುಳಾದಿಗಳು ಭಕ್ತಿಜ್ಞಾನಭರಿತವಾದ ನೂರಾರು ಷಟ್ಪದಿಗಳೂ ಜನಮನದಲ್ಲಿ ಹಚ್ಚಹಸುರಾಗಿ ಈಗಲೂ ನಿಂತಿವೆ.

✪

## ಪ್ರಹಸನ ಪ್ರಸಂಗ

ರಾಮಣ್ಣನ ಮನೆಯ ಫೋನ್ ಬೆಳಿಗ್ಗೆ ಬೆಳಿಗ್ಗೆಯೇ ಶಬ್ದ ಮಾಡಲಾರಂಭಿಸಿತು. ನಿದ್ದೆಯಿಂದೆದ್ದ ರಾಮಣ್ಣ "ಹಲೋ" ಎಂದ. ಅತ್ತ ಕಡೆಯ ಧ್ವನಿ ಹೇಳಿತು, "ನಿನ್ನ ಪ್ರಿಯ ಸ್ನೇಹಿತ ಭೀಮಣ್ಣ ನೆನ್ನೆ ಸಂಜೆ ತೀರಿಕೊಂಡ. ಕುರ್ಚಿಯಲ್ಲಿ ಕುಳಿತು ಟಿ.ವಿ. ನೋಡುತ್ತಿದ್ದ. ಇದ್ದಕ್ಕಿದ್ದಂತೆ ಹೋಗಿಬಿಟ್ಟ!" ರಾಮಣ್ಣ ತಬ್ಬಿಬ್ಬಾಗಿ ಹೋದ. ಅನುಕಂಪೆಯನ್ನು ಸೂಚಿಸುತ್ತ ಹೇಳಿದ, "ಅಯ್ಯೋ ಹೌದೆ! ಅದೆಂತಹ ಟಿ.ವಿ. ಕಾರ್ಯಕ್ರಮವಪ್ಪ! ಪ್ರಾಣವೇ ಹೋಗುವಷ್ಟು ಕೆಟ್ಟದಾಗಿದ್ದದ್ದನ್ನು ಏಕೆ ನೋಡುತ್ತಿದ್ದ!"

❋✿▲✿❋

ಆರು ವರ್ಷದ ಬಾಲಕನೊಬ್ಬ ತಾಯಿ ತಂದೆಯರೊಂದಿಗೆ ಚರ್ಚಿಗೆ ಬಂದಿದ್ದ. ಪಾದ್ರಿಗಳು ಉಪನ್ಯಾಸವನ್ನು ಮಾಡುತ್ತ ಹೇಳಿದರು, "ದೇವರೇ ಎಲ್ಲವನ್ನೂ ಸೃಷ್ಟಿಸಿರುವುದು." ಬಾಲಕ ಕೂಡಲೇ ಎದ್ದು ನಿಂತು ಹೇಳಿದ, "ದೇವರು ಎಲ್ಲವನ್ನೂ ಮಾಡುವುದಿಲ್ಲ. ಬಹಳಷ್ಟು ಪದಾರ್ಥಗಳು ಚೈನಾದಲ್ಲಿ ತಯಾರಾಗುತ್ತವೆ."

❋✿▲✿❋

ದಂತವೈದ್ಯರ ಬಳಿಗೆ ರೋಗಿ ಬಂದು ಚಿಕಿತ್ಸೆಗಾಗಿ ಬಾಯಿ ತೆರೆದ. ವೈದ್ಯರು ಪರೀಕ್ಷೆ ಮಾಡಿ ಹೇಳಿದರು, "ನಿಮಗೆ ಜ್ಞಾನ ತಪ್ಪಿಸಿ ಹಲ್ಲುಗಳನ್ನು ಕೀಳಬೇಕಾಗುತ್ತದೆ." ರೋಗಿಯು "ಒಂದು ನಿಮಿಷ ತಡೆಯಿರಿ" ಎಂದು ಹೇಳುತ್ತ ತನ್ನ ಜೇಬಿನಲ್ಲಿದ್ದ ಹಣ ಎಣಿಸಲು ಪ್ರಾರಂಭಿಸಿದ. "ನೀವು ಮುಂಗಡವಾಗಿ ಹಣ ನೀಡಬೇಕಿಲ್ಲ" ಎಂದು ವೈದ್ಯ ಹೇಳಿದಾಗ ರೋಗಿ ಹೇಳಿದ, "ಇಲ್ಲ. ನೀವು ಜ್ಞಾನ ತಪ್ಪಿಸುವ ಮುಂಚೆ ಎಷ್ಟು ಹಣವಿದೆ ಎಂದು ನೋಡಿಕೊಳ್ಳುತ್ತಿರುವೆ!"

❋✿▲✿❋

ವೈದ್ಯನಾಗಿ ತೇರ್ಗಡೆಯಾದ ಮೇಲೆ ಯುವಕನೊಬ್ಬ ಚರ್ಮರೋಗಗಳ ತಜ್ಞನಾಗಲು ಬಯಸಿ ಆಸ್ಪತ್ರೆಯಲ್ಲಿ ತರಬೇತಿಗೆ ಸೇರಿದ. ಅವನ ಸ್ನೇಹಿತ ಕೇಳಿದ, "ಅಲ್ಲಯ್ಯಾ ಶಸ್ತ್ರಚಿಕಿತ್ಸೆ, ಅಥವಾ ಮೂಳೆ-ಮೆದುಳುಗಳ ತಜ್ಞನಾಗುವುದು ಬಿಟ್ಟು ಚರ್ಮದ ವಿಭಾಗವನ್ನು ಏಕೆ ಆರಿಸಿಕೊಂಡೆ?" ಈತ ಹೇಳಿದ, "ಮೂರು ಮುಖ್ಯ ಕಾರಣಗಳಿವೆ. ಒಂದು ಚರ್ಮರೋಗಿಗಳು ರಾತ್ರಿಯ ಹೊತ್ತು ಬಂದು ಪೀಡಿಸುವುದಿಲ್ಲ. ಎರಡನೆಯದು ಅವರು ಆ ರೋಗದಿಂದ ಸಾಯುವುದಿಲ್ಲ. ಮೂರನೆಯದು ಆ ರೋಗ ವಾಸಿಯೂ ಆಗುವುದಿಲ್ಲ!"

✪